**ದಿನಾಂಕ 17.06.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್.ಡಬ್ಲ್ಯೂ.ಎ. ವಕೀಲರಿಂದಃ**

1. ವಾದಿಯವರ ತಾಯಿ ನನಗೆ ಸಂಬಂಧಿಕರಲ್ಲ, ಸುಮಾರು 40 ವರ್ಷದ ಹಿಂದೆ ಸದರಿಯವರ ಜಮೀನಿನಲ್ಲಿ ನಾನು ಉಳುಮೆ ಮಾಡುತ್ತಿದ್ದೆನು. ನಮ್ಮ ಸ್ವಂತ ಊರು ಶಿರಾ. ವಾದಿಯವರ ತಾಯಿ ಮೃತಪಟ್ಟು ಎಷ್ಟು ವರ್ಷವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಸರ್ವೆ ನಂಬರ್ ಗಳು ಹಾಗೂ ಚಕ್ಕು ಬಂದಿ ನನಗೆ ಹೇಳಲು ಸಾಧ್ಯವಿಲ್ಲ. ದಾವಾ ಜಮೀನುಗಳನ್ನು ವಾದಿಯರ ತಾಯಿ ಯಾವಾಗ ಖರೀದಿ ಮಾಡಿದ್ದರು ಮತ್ತು ಯಾವಾಗ ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ವಿಚಾರಕ್ಕೆ ವಾದಿಯವರು ಹೇಳಿ ಬರೆಸಿದ್ದು, ಅವರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ವಾದಿಯ ತಾಯಿ 1981 ನೇ ಸಾಲಿನಲ್ಲಿ ದಾವಾ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1981 ರಲ್ಲಿ ವಾದಿಯ ತಾಯಿ ದಾವಾ ಜಮೀನು ಮಾರಾಟ ಮಾಡಿದ ನಂತರ 2004 ರಿಂದ 1 ಮತ್ತು 2 ನೇ ಪ್ರತಿವಾದಿಗಳು ದಾವಾ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯವರ ತಾಯಿ ಮಾರಾಟ ಮಾಡಿದ ನಂತರ ಅವರಾಗಲೀ ಅಥವಾ ವಾದಿಯರ ಮಕ್ಕಳಾಗಲೀ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

   ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**